PW-1

ಸಾಕ್ಷಿಯನ್ನು ದಿನಾಂಕ 29.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಎದುರುದಾರರ ಪರ ಶ್ರೀ ಬಿ ಎನ್ ವಕೀಲರಿಂದಃ**

ನಾನು ಟೀ ಅಂಗಡಿ ನಡೆಸುತ್ತಿದ್ದ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಖಾತೆ ಇರುತ್ತದೆ. ನಾನು ಮದುವೆಯಾದ ನಂತರ ಸುಮಾರು ವರ್ಷಗಳಿಂದ ನನ್ನ ಪತಿಯೊಂದಿಗೆ ಹೊಸೂರು ಗ್ರಾಮದಲ್ಲಿ ವಾಸವಾಗಿದ್ದೆ ಎಂದರೆ ಸರಿ. ನನ್ನ ಪತಿ ಮೃತರಾದ ನಂತರ ನನ್ನ ತಂದೆಯವರು ನನಗೆ ಒಂದು ಟೀ ಅಂಗಡಿಯನ್ನು ಇಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಟೀ ಅಂಗಡಿ 10 X 10 ಅಡಿ ಅಳತೆಯದ್ದಾಗಿರುತ್ತದೆ ಎಂದರೆ ಸರಿ. ಸದರಿ ಅಂಗಡಿಯಿಂದ ಬಂದಂತಹ ಲಾಭದಿಂದ ಒಂದು ಮನೆಯನ್ನು ಕಟ್ಟಿಸಿಕೊಂಡಿರುತ್ತೇನೆ ಎಂದರೆ ಟೀ ಅಂಗಡಿ ವ್ಯಾಪಾರದಿಂದ ಹಾಗೂ ನನ್ನ ಇಬ್ಬರು ಗಂಡು ಮಕ್ಕಳು ದುಡಿದ ಹಣದ ಉಳಿತಾಯದಿಂದ ಸದರಿ ಮನೆಯನ್ನು ಕಟ್ಟಿಸಿಕೊಂಡಿರುತ್ತೇನೆ. ನಂತರ ನಾನು ತಂದೆಯವರು 7 ಸೈಟುಗಳ ಪೈಕಿ ಹೆಚ್ಚಿನ ಭಾಗವನ್ನು ಕೋರಿ ಅವರಲ್ಲಿ ಕೇಳಿದ್ದು, ಆ ವಿಚಾರವಾಗಿ ನನ್ನ ಮತ್ತು ನನ್ನ ತಂದೆಯ ಮಧ್ಯ ಮನಸ್ತಾಪ ಇತ್ತು ಎಂದರೆ ಸರಿ. ಸದರಿ ಟೀ ಅಂಗಡಿ ಪ್ರಾರಂಭಿಸುವ ಸಮಯದಲ್ಲಿ ನನ್ನ ಸಹೋದರಿಯರು ಮತ್ತು ಸಹೋದರ ನನಗೆ ಸಹಕಾರ ಕೊಟ್ಟಿರುತ್ತಾರೆ ಎಂದರೆ ಸರಿ. ಗ್ಯಾ ಸಿಲಿಂಡರ್ ಸ್ಫೋಟಗೊಂಡು ಸದರಿ ಟೀ ಅಂಗಡಿ ನಾಶವಾಯಿತು ಎಂದರೆ ಸರಿ. ಅದಾದ ನಂತರ ಸದರಿ 7 ಸೈಟುಗಳ ಪೈಕಿ ಎರಡು ಸೈಟ್ ಗಳ ಮಧ್ಯ ದೊಡ್ಡದಾದ ಟೀ ಕ್ಯಾಂಟೀನ್ ನಡೆಸಲು ಪ್ರಾರಂಭಿಸಿದೆ ಎಂದರೆ ಸರಿಯಲ್ಲ. ಮೊದಲಿನ 10 x 10 ಅಳತೆಯ ಜಾಗದಲ್ಲಿ ಟೀ ಅಂಗಡಿ ನಡೆಸಲು ಪ್ರಾರಂಭಿಸಿದಾಗ 4ನೇ ಪ್ರತಿವಾದಿ ಹಾಗೂ ಇತರರು ಗಲಾಟೆ ಮಾಡಿರುತ್ತಾರೆ. ನಾನು ಮೊದಲಿನಿಂದ ನಡೆಸುತ್ತಿದ್ದ ಅಳತೆಯ ಜಾಗದಲ್ಲಿ ಮಾತ್ರವೇ ಟೀ ಅಂಗಡಿ ನಡೆಸಿ ಎಂದು 1 ಮತ್ತು 2ನೇ ಪ್ರತಿವಾದಿ ಹೇಳಿರುತ್ತಾರೆ ವಿನಃ ಬೇರೆ ಯಾವುದೇ ರೀತಿಯಲ್ಲಿ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಟೀ ಅಂಗಡಿ ನಡೆಸಲು ಪ್ರೋತ್ಸಾಹ ಮಾಡಿದ ನನ್ನ ತಂದೆ-ತಾಯಿ ಸಹೋದರ-ಸಹೋದರಿಯರು, ಅಪ್ರಾಪ್ತ ಮಕ್ಕಳ ವಿರುದ್ಧ ಪೊಲೀಸರಿಗೆ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಗೆ ನನ್ನ ತಂದೆ ತಾಯಿ ಬಂದು ಪೊಲೀಸರಿಗೆ ತಾವು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮೊದಲ ಟೀ ಅಂಗಡಿ ಸುಟ್ಟು ಹೋದ ಮೇಲೆ ಎರಡನೇಯದಾಗಿ ಟೀ ಅಂಗಡಿಯನ್ನು ನಿರ್ಮಾಣ ಮಾಡಲು ಯಾವ ಅಚಾರರಿಗೆ ಕೆಲಸ ಮಾಡಲು ವಹಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೊದಲು ನಡೆಸುತ್ತಿದ್ದ ಪೇಟ್ಟಿ ಅಂಗಡಿಯ ತರಹವೇ ಹೊಸದಾಗಿ ಟೀ ಅಂಗಡಿ ಮಾಡಲು ಹೊರಟಿದ್ದೆ. ಅದೇ ಸ್ಥಳದಲ್ಲಿ ಪೇಟ್ಟಿ ಅಂಗಡಿಯನ್ನು ಮಾಡಿಸಿ ಪೂಜೆ ಮಾಡಲು ತಯಾರಿ ನಡೆಸುತಿದ್ದಾಗ ಗಲಾಟೆ ಆಗಿರುತ್ತದೆ. ನಾನು ಪ್ರಸ್ತುತ ಬೇರೆ ಕಡೆ ಕಬ್ಬಿಣದ ಕಂಟೇನರ್ ಬಳಸಿ ಪಕ್ಕ ಜಾಗದಲ್ಲಿ ಟೀ ಅಂಗಡಿ ನಡೆಸುತ್ತಿದ್ದೇನೆ. ನಾನು ಮೊದಲು ನಡೆಸುತ್ತಿದ್ದ ವಿಸ್ತೀರ್ಣದ ಜಾಗದಲ್ಲಿ ಹೊಸದಾಗಿ ಟೀ ಅಂಗಡಿ ಮಾಡಲು ಹೊರಟಿದ್ದು, ಆದರೆ ಸದರಿ ಜಾಗವನ್ನು ಅಳತೆ ಮಾಡಿಸಿರುವುದಿಲ್ಲ ಏಕೆಂದರೆ ಹಿಂದೆ ಇದ್ದ ವಿಸ್ತೀರ್ಣದ ಜಾಗದಲ್ಲಿಯೆ ಟೀ ಅಂಗಡಿ ಮಾಡಲು ಹೊರಟಿದ್ದೆ. ನಾನು ಹಿಂದೆ ವಿಸ್ತೀರ್ಣದ ಜಾಗದಲ್ಲಿಯೇ ಟೀ ಅಂಗಡಿ ಮಾಡುವ ಉದ್ದೇಶ ಇದ್ದರೆ JCB ಮೂಲಕ ಸದರಿ ಸ್ಥಳವನ್ನು ಸಮತಟ್ಟು ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸದರಿ ಜಾಗದಲ್ಲಿ ನೀರು ನಿಂತಿದ್ದು, ಮಣ್ಣು ಸೇರಿತ್ತು ಅವುಗಳನ್ನು ಸಮತಟ್ಟು ಮಾಡುವ ಉದ್ದೇಶದಿಂದ JCB ತರಿಸಿದ್ದೇವು. ಹೊಸದಾಗಿ ಕಬ್ಬಿಣದ ಕಂಟೇನರ್ ನಲ್ಲಿ ಟೀ ಅಂಗಡಿ ನಿರ್ಮಾಣ ಮಾಡಿದ್ದಲ್ಲಿ ವಿದ್ಯುತ್ಶಕ್ತಿಯ ಅವಶ್ಯಕತೆ ಇದೆ ಎಂದರೆ ಸರಿ. ನಾನು ಪ್ರಸ್ತುತ ನಡೆಸುತ್ತಿರುವ ಕಬ್ಬಿಣದ ಕಂಟೇನರ್ ನಲ್ಲಿ ಟೀ ಅಂಗಡಿ ಅನಧಿಕೃತವಾಗಿ ವಿದ್ಯುತ ಸರಬರಾಜು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಂಟೇನರ್ ಟೀ ಅಂಗಡಿಗೆ ವಿದ್ಯುತ್ ಸರಬರಾಜು ಇದೆ ಎಂದರೆ ಸರಿ. ಗಲಾಟೆಯಾದ ದಿನ ಸದರಿ ಸ್ಥಳದಲ್ಲಿ ಇದ್ದ ಮಣ್ಣು ಮತ್ತು ನೀರನ್ನು ಸಮತಟ್ಟು ಮಾಡಲು JCB ರವರಿಗೆ

ಹೇಳಿದ್ದೆ. ಸದರಿ JCB ಮಾಲೀಕರು ಯಾರು ಎಂದರೆ ನನಗೆ ಗೊತ್ತಿರುವುದಿಲ್ಲ. JCB ಚಾಲಕನ ಹೆಸರು ಗೊತ್ತಿರುವುದಿಲ್ಲ. ನಾನು ಸ್ಥಳಕ್ಕೆ ಹೋಗುವ ಮುಂಚೆ JCB ಬಂದು ನಿಂತಿತ್ತು. ಸ್ಥಳದಲ್ಲಿ ನಾನು ನನ್ನ ಇಬ್ಬರು ಮಕ್ಕಳು ಇದ್ದು, ನಂತರ ವೆಂಕಟೇಶ, ಸವಿತಾ, ಪವನ್ ಹಾಗೂ ಅವರ ಮಕ್ಕಳು, ನನ್ನ ತಂದೆ ತಾಯಿ ಬಂದಿರುತ್ತಾರೆ. JCB ಚಾಲಕ ಸ್ಥಳದಲ್ಲಿ ಮಟ್ಟಮಾಡುವಾಗ ಅವರು ಗಲಾಟೆ ಮಾಡಿರುತ್ತಾರೆ. ಗಲಾಟೆ ಮಾಡುವ ಸಮಯದಲ್ಲಿ ಕಂಟೇನರ್ ನಿರ್ಮಾಣಕ್ಕೆ ಬೇಕಾದ ಯಾವುದೇ ವಸ್ತುಗಳನ್ನು ಸ್ಥಳಕ್ಕೆ ತಂದಿರಲಿಲ್ಲ. ನಾನು ಹೊಸದಾಗಿ ಮಾಡಿದ ಕಬ್ಬಿಣದ ಕಂಟೇನರ್ ಅಂಗಡಿಯನ್ನು ಹಳೆಯ ಪೇಟ್ಟಿ ಅಂಗಡಿಯ ಸ್ಥಳದಲ್ಲಿ ಇಡಲು ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಹಳೆಯ ಸ್ಥಳದಲ್ಲಿ ಯಾವುದೇ ಪೇಟ್ಟಿ ಅಂಗಡಿಯನ್ನು ಇಟ್ಟಿರುವುದಿಲ್ಲ, ಕಂಟೇನರ್ ಅಂಗಡಿಯನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಬೇರೆಯವರಿಗೆ ಸೇರಿದ ಸ್ಥಳದಲ್ಲಿ ಬಾಡಿಗೆ ಕೊಟ್ಟು ಕಬ್ಬಿಣದ ಶೀಟ್ ಹಾಕಿದ ಶೇಡ್ ನಲ್ಲಿ ಟೀ ಅಂಗಡಿ ನಡೆಸುತ್ತಿದ್ದೇನೆ. ಗಲಾಟೆ ನಡೆಯುವಾಗ ನಾನು ಹಳೆ ಸ್ಥಳದಲ್ಲಿ ಪೇಟ್ಟಿ ಟೀ ಅಂಗಡಿಯನ್ನು ನಡೆಸಲು ಯಾವುದೇ ಪ್ರಯತ್ನ ಮಾಡಿರಲಿಲ್ಲ ಎಂದರೆ ಸರಿಯಲ್ಲ.

ಈ ನ್ಯಾಯಾಲಯದಲ್ಲಿ ಆದ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶದ ವಿರುದ್ಧ 4ನೇ ಪ್ರತಿವಾದಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು, 250 ಚದರ ಅಡಿ ಜಾಗದಲ್ಲಿ ಮಾತ್ರವೇ ಟೀ ಅಂಗಡಿ ನಡೆಸಬಹುದು ಎಂದು ಆದೇಶ ಆಗಿರುತ್ತದೆ ಎಂದರೆ ಸರಿ. ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶದ ವಿರುದ್ಧ 4ನೇ ಪ್ರತಿವಾದಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುವ ವಿಚಾರ ಗೊತ್ತಿದ್ದರೂ, ಅದೇ ಸಮಯದಲ್ಲಿ ಟೀ ಅಂಗಡಿ ಮಾಡುವ ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 02.01.2023 ಹಾಗೂ 23.01.2023 ರಂದು ಎದುರುದಾರರು ಟೀ ಅಂಗಡಿ ನಡೆಸುತ್ತಿದ್ದ ಸ್ಥಳಕ್ಕೆ ಬಂದು ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲು ಇದ್ದ ಅಳತೆಯ ಜಾಗದಲ್ಲಿ ಟೀ ಅಂಗಡಿ ನಡೆಸುವ ಬದಲು ಎದುರುದಾರರಿಗೆ ಸೇರಿದ 100 x 100 ಜಾಗದಲ್ಲಿ ಟೀ ಅಂಗಡಿ ನಡೆಸಲು ಪ್ರಾರಂಭಿಸಿದ್ದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಅನುಮತಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ಗುಂಡ್ಲುಪೇಟೆ